ಶ್ರೀ ಎ. ಜೆ. ದೊಡ್ಡಮೇಟಿ.—ನನ್ನ ರಿಪೋರ್ಟ್‌ನಲ್ಲಿ ಅದು ಇಲ್ಲ. ಚಿಂಚೊಳ್ಳಿಯಲ್ಲಿ 9 ಲಕ್ಷ ಚಿಲ್ಲರೆಯ ಕಾಮಗಾರಿಗಳು, ದೇವದುರ್ಗದಲ್ಲಿ 12 ಸಾವಿರ ಚಿಲ್ಲರೆಯ ಕಾಮಗಾರಿಗಳನ್ನು ತೆಗೆದು ಕೊಳ್ಳಲಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ ನಾನು ಪ್ರಶ್ನೆ ನೀರಾವರಿ ಕಡೆ, ಕೆರೆಯ ಹಾಗೂ ಕಟ್ಟಡಗಳಿಗೆ ಸಂಬಂಧಿಸಿದಂತೆ ಕೇಳಿದ್ದೇನೆ. ಈಗ ಚಿಂಚೊಳ್ಳಿಯಲ್ಲಿ ಚಂದ್ರಂಪಳ್ಳಿ ಪ್ರೊಜೆಕ್ಟ್ ಇದ್ದರೆ ನೀವು ಮತ್ತು ಮಾಜಿ ಪಿ. ಡಬ್ಲ್ಯು.ಡಿ. ಮಂತ್ರಿಯವರು ರಾಜಿನಾಮೆ ಕೊಡುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—ಅದು ಏನಾದರೂ ದೊಡ್ಡ ಪ್ರೊಜೆಕ್ಟ್ ಇರಬಹುದು, ಅದನ್ನು ಇಲ್ಲಿ ಸೇರಿಸದಿರಬಹುದು.

ಶ್ರೀ ಸದಾಶಿವಪ್ಪ ಪಾಟೀಲ್.—ನೀವು ಕೊಡುವುದೊಂದು ನಾವು ಕೇಳುವುದೊಂದು.

Sri G. CHANDRAKANTH.—Is it a fact that the project of Chandrampalli has come up in Chincholi Taluk? If it has come up, what is its estimated cost when it is completed ?

ಶ್ರೀ ಎ. ಜೆ. ದೊಡ್ಡಮೇಟಿ.—ಇಲ್ಲಿ ಕೇಳಿದ ಪ್ರಶ್ನೆ ಮೈನರ್ ಇರಿಗೇಶನಿನಲ್ಲಿ ಬರುವುದಿಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಸದಾಶಿವಪ್ಪ ಪಾಟೀಲ್.—ಪಾಯಿಂಟ್ ಆಫ್ ಆರ್ಡರ್. ನಾನು ಪ್ರಶ್ನೆ ಕೇಳುವುದು ಪ್ರಶ್ನೆ ನೀರಾವರಿ ಬಗ್ಗೆ. ಮಾನ್ಯ ಮಂತ್ರಿಯವರು ಸಣ್ಣ ನೀರಾವರಿ ದೊಡ್ಡ ನೀರಾವರಿ ಎಂದು ಹೇಳುತ್ತಾರೆ. ನಮಗೆ ಬೇಕಾಗಿರುವುದು, ಇಲ್ಲಿ ನೀರಾವರಿ ಕೆಲಸ ಎಷ್ಟು ತೆಗೆದುಕೊಂಡಿದ್ದಾರೆ, ಅದರ ಮೇಲೆ ಎಷ್ಟು ಖರ್ಚು ಮಾಡಿದ್ದಾರೆ ಎಂಬುದು.

(ಉತ್ತರವಿಲ್ಲ)

ಶ್ರೀ ಕೆ. ಪುಟ್ಟಸ್ವಾಮಿ (ಕಾರ್ಮಿಕ ಶಾಖೆಯ ಮಂತ್ರಿಯವರು).—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯಲ್ಲಿ ಮೈನರ್ ಇರಿಗೇಷನ್ ಮತ್ತು ಮೇಜರ್ ಇರಿಗೇಶನ್ ಬರುತ್ತದೆ. ಈಗ ಇವರು ದೊಡ್ಡ ಪ್ರೊಜೆಕ್ಟ್ ಎಷ್ಟಾರ ಕೇಳಿದ್ದಾರೆ. ಅದಕ್ಕೆ ಮಾಹಿತಿ ಸಂಗ್ರಹಿಸಿ ಟೇಬಲ್ ಮೇಲೆ ಇಡುತ್ತೇವೆ.

Mr. SPEAKER.—I hold over the question. The Minister in charge will collect all the information. Every information sought for has to be made available to the hon. Member.

ಶ್ರೀ ಎ. ಜೆ. ದೊಡ್ಡಮೇಟಿ.—ಇದರೊಳಗೆ ಅನೇಕ ಮಾತುಗಳು ನನಗೆ ಸಂಬಂಧಿಸದೆ ಇದ್ದವುಗಳನ್ನು ಸೇರಿಸಿದ್ದಾರೆ. ಅದನ್ನು ಸ್ಪ್ಲಿಟಪ್ ಮಾಡಿ, ನನಗೆ ಸಂಬಂಧಿಸಿದುದನ್ನು ನನಗೆ ಸೇರಿಸಬೇಕು.

Mr. SPEAKER.—Hon'ble Member has put the question to Government. Hon. Doddameti or some other hon. Minister, has to take the responsibility to furnish all the information sought for. The question is deferred to Monday. Next Question No. 28.

Aluminium Factory, Belgaum

137. Sri M. NAGAPPA (Raichur).—

Will the Minister for Public Works be pleased to state:—

(*a*) whether there is any water supply scheme at Government cost to Aluminium Factory, Belgaum ;

(*b*) if so, the estimated cost of the scheme ;

(*c*) whether the work is under progress and the amount spent already (year-wise may be given) ?

A.—Sri K. LAKKAPPA (Minister for Public Works).—

(*a*) Yes.

(*b*) Rs. 30.00 lakhs.

(*c*) Yes.

Amount spent during 66-67 is Rs. 4,50,837 and during

67–68	...	15,75,775
during 68–69 (to end of 6/66)	...	2,88,143
Total	...	23,14,755

ಶ್ರೀ ಎಂ. ನಾಗಪ್ಪ.—ಈಗ 30 ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ಖಾಸಗೀ ಸಂಸ್ಥೆಗೆ ನೀರು ಸರಬರಾಜು ಮಾಡುತ್ತಿದ್ದೀರಿ. ಅದರಂತೆ ಮುನಿಸಿಪಾಲಿಟಿಗಳಿಗೆ ಸರ್ಕಾರದ ವತಿಯಿಂದ ಎಲ್.ಐ.ಸಿ. ಕಾರ್ಪೊರೇಷನ್ನಿನಿಂದ ಲೋನ್ ತೆಗೆದುಕೊಂಡರೆ ಸೆಕ್ಯೂರಿಟಿಯಾಗುತ್ತದೆ. ಖಾಸಗೀ ಸಂಸ್ಥೆಗೆ ಸರ್ಕಾರದ ದುಡ್ಡನ್ನು ಉಪಯೋಗಿಸುವುದಾದರೆ, ಪಬ್ಲಿಕ್ ಬಾಡಿಗೆ ಏಕೆ ಸಹಕಾರ ಮಾಡುವುದಕ್ಕೆ ಸಾಧ್ಯವಾಗಿಲ್ಲ?

ಶ್ರೀ ಕೆ. ಲಕ್ಕಪ್ಪ.—ಇದು ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಸಂಬಂಧಪಟ್ಟುದು. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ ಸರ್ಕಾರಕ್ಕೆ ನಾನಾ ರೀತಿಯಲ್ಲಿ ಸಹಾಯವಾಗುವುದರ ಜೊತೆಗೆ ಸಾರ್ವಜನಿಕರಿಗೆ ನಾನಾ ರೀತಿಯಲ್ಲಿ ಸಹಾಯವಾಗುತ್ತದೆ. ಅದರಿಂದ ಬೇಕಾದಷ್ಟು ಎಂಪ್ಲಾಯ್‌ಮೆಂಟ್ಸ್ ಸಿಗುತ್ತವೆ. ಇತರೇ ಸೌಲಭ್ಯಗಳು ಸಿಗುತ್ತವೆ. ಇಂತಹ ಕೈಗಾರಿಕೆಗಳನ್ನು ಸ್ಥಾಪನೆಮಾಡುವುದಕ್ಕೆ ಮುಂದೆ ಬರುವವರಿಗೆ ಇತರೇ ಸಂಸ್ಥೆಗಳಿಗಿಂತ ಜಾಸ್ತಿ ಸಹಾಯ ಕೊಡುವುದು ಅವಶ್ಯಕ. ಆದ್ದರಿಂದ ಸರ್ಕಾರದ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವ ಸಲುವಾಗಿ ಇದಕ್ಕೆ ಸಹಾಯ ಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ಮನುಷ್ಯನು ಜೀವನವಾಡುವುದಕ್ಕೆ ಮುಖ್ಯವಾದುದು ನೀರು, ಅಂದಮೇಲೆ ದೊಡ್ಡ ದೊಡ್ಡ ಪಟ್ಟಣಗಳಿಗೆ ನೀರು ಸಪಲತ್ತು ಕೊಡದೆ ನೌಕರಿಗಳ ಸಪಲತ್ತು ಕೊಡುತ್ತಿದ್ದೀರಿ. ನೀರು ಮುಖ್ಯವೋ, ನೌಕರಿಗಳು ಮುಖ್ಯವೋ?

ಶ್ರೀ ಕೆ. ಲಕ್ಕಪ್ಪ.—ಪಟ್ಟಣಗಳಿಗೆ ನೀರು ಕೊಡುವುದು ಅವಶ್ಯಕವೆಂದು ಎಲ್ಲಾ ಅನುಕೂಲತೆಗಳನ್ನು ಸಾಕಾದಷ್ಟು ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಇದು 30 ಲಕ್ಷ ರೂಪಾಯಿಗಳ ಪ್ರಾಜೆಕ್ಟ್ ಆಗಿದೆ. ಇದಕೆ ಅಲ್ಯೂಮಿನಿಯಂ ಫ್ಯಾಕ್ಟರಿಯವರು ನೀರು ಸರಬರಾಜಿಗೋಸ್ಕರ ಏನಾದರೂ ಕಂಟ್ರಿಬ್ಯೂಷನ್ ಕೊಟ್ಟಿದ್ದಾರೆಯೇ?

ಶ್ರೀ ಕೆ. ಲಕ್ಕಪ್ಪ.—ಅವರೇನೂ ಕಾಂಟ್ರಿಬ್ಯೂಷನ್ ಕೊಟ್ಟಿಲ್ಲ. ಈ ಕೆಲಸವನ್ನು ಸರ್ಕಾರದವರೇ ಮಾಡತಕ್ಕದ್ದು. ಇದರ ಖರ್ಚೆಲ್ಲವೂ ಹುಟ್ಟುವಳಿಯಾಗುವ ರೀತಿಯಲ್ಲಿ ಲೆಕ್ಕಾಚಾರ ಹಾಕಿ ಮಾಡಿದೆ. ಈ ನೀರು ಸರಬರಾಜಿಗೆ ಇಷ್ಟು ದುಡ್ಡು ಬರಬೇಕೆಂದು ಗೊತ್ತುಮಾಡಿದ್ದೇವೆ.

Sri B. B. SAYANAK.—May I know the capacity of the reservoir and how many gallons of water will be required for the Belgaum City and for the recently merged villages of Belgaum City?

Mr. SPEAKER.—It is beyond the scope of the main Question.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ಈ ಯೋಜನೆಗೆ 23 ಲಕ್ಷ ರೂಪಾಯಿಗಳು ಚಿಲ್ಲರೆ ಖರ್ಚು ಮಾಡಿದ್ದೀರಿ. ಈಗ ಅದು ಯಾವ ಮಟ್ಟದಲ್ಲಿದೆ? ನೀರು ಅಲ್ಲ ಇನ್ನು ಎಷ್ಟು ದಿವಸಗಳಲ್ಲಿ ಸಿಗಬಹುದು? ಆ ನೀರು ಬೇರೆ ಕಾರ್ಖಾನೆಗೂ ಉಪಯೋಗವಾಗುತ್ತದೆಯೇ? ಅಥವಾ ಬೆಳಗಾಂ ಸಿಟಿಗೆ ಮಾತ್ರ ಉಪಯೋಗವಾಗುತ್ತದೆಯೇ?

ಶ್ರೀ ಕೆ. ಲಕ್ಕಪ್ಪ.—ಮೊದಲಿನಿಂದಲೂ ಬೆಳಗಾಂ ಸಿಟಿಗೂ ನೀರು ಕೊಡುವ ವ್ಯವಸ್ಥೆ ಇತ್ತು. ಜೊತೆಗೆ ಈ ಫ್ಯಾಕ್ಟರಿಗೂ ಕೊಡುವ ವ್ಯವಸ್ಥೆ ಮಾಡಿದೆ. ಬೆಳಗಾಂ ಸಿಟಿಗೂ ಈ ಯೋಜನೆ ಪ್ರಕಾರ ಕೊಡಬಹುದು. ಈ ಕಾರ್ಖಾನೆ 1969ರ ಅಂತ್ಯದೊಳಗೆ ಪ್ರಾರಂಭವಾಗಬೇಕಾಗಿರುವುದರಿಂದ ಅಷ್ಟರೊಳಗೆ ನೀರು ಕೊಡಬೇಕಾಗಿದೆ. ಅಂಕಿ ಅಂಶಗಳ ಪ್ರಕಾರ 30 ಲಕ್ಷ ರೂಪಾಯಿಗಳಲ್ಲಿ 23 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಉಳಿದ ಮೊಬಲಗನ್ನು ಖರ್ಚು ಮಾಡಿ ಸರಕಾರದಲ್ಲಿ ನೀರು ಕೊಡುವುದಕ್ಕೆ ವ್ಯವಸ್ಥೆಮಾಡಿದೆ.

ಶ್ರೀ ಕೆ. ಎಚ್. ಪಾಟೀರ್.—ಅಲ್ಯೂಮಿನಿಯಂ ಫ್ಯಾಕ್ಟರಿಗೆ 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಈ ತರಹವೇ ಮೈನೂರು ರಾಜ್ಯದಲ್ಲಿ ಇನ್ನಾವುದಾದರೂ ಕೈಗಾರಿಕೆಗೆ ಸಂಪೂರ್ಣವಾಗಿ ಸರ್ಕಾರದ ಖರ್ಚಿನಿಂದ ನೀರು ಒದಗಿಸುವ ಏರ್ಪಾಡು ಮಾಡಿದ್ದೀರಾ ? ಅಥವಾ ಇದು ಒಂದಕ್ಕೆ ಮಾತ್ರ ಆ ರೀತಿ ಮಾಡುತ್ತೀರಾ ?

Mr. SPEAKER.—It is beyond the scope of the main question.

ಶ್ರೀ ಬಿ. ಪರಮೇಶ್ವರಪ್ಪ.—ಈ ಕೈಗಾರಿಕೆಗೆ ಸಂಬಂಧಪಟ್ಟಂತೆ ಈ ಯೋಜನೆಯನ್ನು ತೆಗೆದು ಕೊಂಡರೂ ಆ ಕೈಗಾರಿಕೆಯವರಿಂದ ಯಾವ ಕಾಂಟ್ರಿಬ್ಯೂಷನ್ನನ್ನೂ ಇನ್ನೂ ಪಡೆದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿ ಯೋಜನೆಗಳನ್ನು ಮಾಡುವಾಗ ಸೇಕಡ 10ರಷ್ಟಾದರೂ ಕಾಂಟ್ರಿಬ್ಯೂಷನ್ ಕೊಡಬೇಕೆಂದಿರುವಾಗ, ಅದನ್ನು ಸರ್ಕಾರದ ವತಿಯಿಂದ ಖರ್ಚುಮಾಡುವಾಗ, ಏಕೆ ಅವರಿಂದ ಕಾಂಟ್ರಿಬ್ಯೂಷನನ್ನು ಪಡೆಯಲಿಲ್ಲ ?

ಶ್ರೀ ಕೆ. ಲಕ್ಕಪ್ಪ.—ಈ ಕಂಟ್ರಿಬ್ಯೂಷನ್ ಪಡೆಯುದೆ ಈ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಕೈಗಾರಿಕೆ ಜರೂರಾಗಿ ಸ್ಥಾಪನೆಯಾಗುತ್ತದೆ. ಅದರಿಂದ ದೇಶಕ್ಕೆ ಹೆಚ್ಚಿನ ರಾಭ ಆಗುತ್ತದೆ. ಸರ್ಕಾರಕ್ಕೂ ಆದಾಯ ಇದೆ ಎನ್ನುವುದನ್ನು ಮನಗಂಡು ಈ ರೀತಿ ಮಾಡಿದ್ದೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ—ಈ ಕಾರ್ಖಾನೆಗೆ ಸರ್ಕಾರದಿಂದ ಬಂಡವಾಳವನ್ನು ಹಾಕಿದೆಯೇ, ಮತ್ತು ಈ ಕಾರ್ಖಾನೆಗೆ ನೀರನ್ನು ಒದಗಿಸುವಂತಹ ದರ ಏನು, ಬೆಳಗಾಮ್ ಮುನಿಸಿಪಾಲಿಟಿಯು ವಾಟರ್ ಸಪ್ಲೈ ಸ್ಕೀಮಿನವರು ನೀರು ಒದಗಿಸುವ ದರದಲ್ಲಿಯೇ ಒದಗಿಸುತ್ತೀರಾ ಅಥವಾ ಯಾವ ದರದಲ್ಲಿ ನೀರು ಒದಗಿಸುತ್ತೀರಿ ?

ಶ್ರೀ ಕೆ. ಲಕ್ಕಪ್ಪ.—ಇದು ಈ ಪ್ರಶ್ನೆಗೆ ಮೀರಿದಂತಹ ಪ್ರಶ್ನೆ. ಇದಕ್ಕೆ ಬೇರೆ ರೇಟಿನಲ್ಲಿ ನೀರು ಕೊಡಬೇಕಾಗುತ್ತದೆ. ಒಂದು ಪಾವಿರ ಗ್ಯಾಲನ್ನಿಗೆ ಒಂದು ರೂಪಾಯಿ 20 ನಯಾಪೈಸೆಯಂತೆ ಕೊಡಬೇಕೆಂದು ಚಾರ್ಜ್ ಮಾಡುತ್ತೇವೆ. ಬೆಳಗಾಮ್ ಮುನಿಸಿಪಾಲಿಟಿಯವರು ಏನು ಚಾರ್ಜ್ ಮಾಡುತ್ತಾರೆ ಎನ್ನುವ ಅಂಶ ನನ್ನಲ್ಲಿ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಬೆಳಗಾಮ್ ಮುನಿಸಿಪಾಲಿಟಿಯಿಂದ ನೀರನ್ನು ಒದಗಿಸುತ್ತಿದ್ದಾರೆ ಎಂದು ಹೇಳಿದ್ದೀರಿ, ಹಾಗಾದರೆ ಅಲ್ಯೂಮಿನಿಯಂ ಫ್ಯಾಕ್ಟರಿಯವರು ಮತ್ತು ಬೆಳಗಾಮ್ ಮುನಿಸಿಪಾಲಿಟಿಯವರೂ ಏನಾದರೂ ಒಪ್ಪಂದ ಮಾಡಿ ಕೊಂಡಿದ್ದಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಹಿಂದೆ ಫ್ಯಾಕ್ಟರಿಯವರು ಒಪ್ಪಂದ ಮಾಡಿಕೊಂಡಿದ್ದಾರೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಸ್ವಾಮಿ, ಹಿಂದೆ ಇದೇ ತರಹ ಉದ್ಯಮಗಳನ್ನು ಸ್ಥಾಪನೆ ಮಾಡಿರುವವರಿಗೆ ಕೊಟ್ಟಿದ್ದೀರಾ, ಈ ಕಾರ್ಖಾನೆಯವರಿಗೆ ಸ್ಪೆಷರ್ ಸೌಲಭ್ಯವನ್ನು ಕೊಡುವುದಕ್ಕೆ ಏನು ಕಾರಣ ಇದೆ ?

Mr. SPEAKER.—That is beyond the scope of the main question.

Sri G. CHANDRAKANTH.—Has it come to the notice of the Government that there is acute scarcity of water in Belgaum City and such being the case how can this get precedence over other problems ?

ಶ್ರೀ ಕೆ. ಲಕ್ಕಪ್ಪ.—ನೀರಿನ ಪ್ರಾಬ್ಲಮ್ ಅಕ್ಯೂಟ್ ಆಗಿದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ.

Sri D. B. KALMANKAR.—May I know whether they have any proposal to take over the aluminium factory ultimately ?

Mr. SPEAKER.—That is beyond the scope of the main question.

Sri R. NAGAN GOUDA.—The Government has agreed to spend 30 lakhs on this water scheme for the factory. May I know what is the Government money involved in this factory ?

Mr. SPEAKER.—That is beyond the scope of the main question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಅಲ್ಯುಮಿನಿಯಂ ಫ್ಯಾಕ್ಟರಿಯ ಮಾಲೀಕರಿಗೆ ಕೆಲವು ಷರತ್ತುಗಳನ್ನು ಹಾಕಿ, ಅವರು ಆ ಹಣವನ್ನು ವಾಪಸ್ಸು ಕೊಡಬೇಕೆಂದು ಒಪ್ಪಂದ ಮಾಡಿಕೊಂಡಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಷರತ್ತುಗಳು ಏನು, ಎಷ್ಟು ದಿವಸಗಳಲ್ಲಿ ಆ ಹಣವನ್ನು ವಾಪಸ್ಸು ಕೊಡಬೇಕೆಂದು ಷರತ್ತಿನಿಂದ ಗೊತ್ತಾಗುತ್ತದೆ ?

ಶ್ರೀ ಕೆ. ಲಕ್ಕಪ್ಪ. —ಅದಕ್ಕೆ ನೋಟೀಸ್ ಕೊಟ್ಟರೆ ವಿವರವನ್ನು ಓದಗಿಸುತ್ತೇನೆ.

Sri C. K. RAJAIAH SETTY.—May I know the quantum of water required by the industry and water that is stored in the dam ?

ಶ್ರೀ ಕೆ. ಲಕ್ಕಪ್ಪ.—ಒಂದು ದಿವಸಕ್ಕೆ ಕೊನೆಯ ಪಕ್ಷ ಒಂದು ಮಿಲಿಯನ್ ಗ್ಯಾಲನ್ ನೀರು ಕೊಡಬೇಕೆಂದು ಒಪ್ಪಂದವಾಗಿದೆ. ಅದನ್ನು ಕೊಡುವುದಕ್ಕೆ ಸಾಕಷ್ಟು ವ್ಯವಸ್ಥೆಯನ್ನು ಮಾಡಿ ಕೊಂಡಿದೆ. ಅಗ್ರಿಮೆಂಟ್ ಪ್ರಕಾರ ಕೊಡತಕ್ಕ ವ್ಯವಸ್ಥೆ ಮಾಡಿದೆ.

Sri H. N. NANJE GOWDA.—The Minister was pleased to say that they have entered into an agreement regarding terms and conditions. Would the Government lay a copy of the agreement on the Table of the House ?

ಶ್ರೀ ಕೆ. ಲಕ್ಕಪ್ಪ.—ಟೇಬಲ್ ಮೇಲೆ ಇಡುವಂಥಾದ್ದಾದರೆ ಇಡುತ್ತೇವೆ. ಟೇಬಲ್ ಮೇಲೆ ಇಡುವುದಕ್ಕೆ ಆಗದೇ ಇರುವಂಥಾದ್ದಾದರೆ ಅದನ್ನು ಇಡುವುದಕ್ಕೆ ಆಗುವುದಿಲ್ಲ.

Mr. SPEAKER.—If there is nothing confidential about it, the agreement may be placed on the Table.

Abolition of Land Revenue

138. Sri H. N. NANJE GOWDA (Arkalgud).—

Will the Minister for Revenue be pleased to state :—

(*a*) whether they have sought the advice of the Planning Commission or Government of India in regard to the desirability or otherwise of the 'Abolition of Land Revenue' ;

(*b*) if so, the advice tendered by them ;

(*c*) the reaction of the State Government on the advice so tendered ?

A.—Sri H. V. KOUJALGI (Minister for Revenue).—

(*a*) No.

(*b*) and (*c*) Do not arise in view of reply to question (*a*) above.

ಶ್ರೀ ಹೆಚ್. ಎನ್. ನಂಜೇಗೌಡ.—ಹಿಂದೆ ಇದೇ ಸಭೆಯಲ್ಲಿ ಎಂದರೆ ಜನವರಿ ಅಥವಾ ಮಾರ್ಚ್ ತಿಂಗಳಲ್ಲಿ ಯೋಜನಾ ಆಯೋಗಕ್ಕೆ ಹಾಗೂ ಕೇಂದ್ರ ಸರಕಾರಕ್ಕೆ ಲ್ಯಾಂಡ್ ರೆವಿನ್ಯೂ ರದ್ದು ಮಾಡುವ ಬಗ್ಗೆ ಸಲಹೆಗಳನ್ನು ಕಳುಹಿಸಿರಲಿಲ್ಲವೇ ?